ಸಮಾಚಾರ ಸಣ್ಣದಲ್ಲ

ಕಾಂಗ್ರೆಸ್ ತೊರೆದ ದೆಹಲಿ ಇಬ್ಬರು ಮಾಜಿ ಶಾಸಕರು

ದೆಹಲಿ: ದೆಹಲಿಯಲ್ಲಿ ಕಾಂಗ್ರೆಸ್‌ನ ಮಾಜಿ ಶಾಸಕರಾದ ನೀರಜ್ ಬಸೋಯ ಮತ್ತು ನಸೀಬ್ ಸಿಂಗ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಬುಧವಾರ ರಾಜೀನಾಮೆ ನೀಡಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದು ರಾಜೀನಾಮೆ ಸಲ್ಲಿಸಿದ್ದಾರೆ. 7 ವರ್ಷಗಳಿಂದ ದೆಹಲಿಯಲ್ಲಿ ಎಎಪಿ ಅಧಿಕಾರದಲ್ಲಿದ್ದು, ಹಲವು ಹಗರಣಗಳಲ್ಲಿ ಭಾಗಿಯಾಗಿದೆ. ಸಿಎಂ ಅರವಿಂದ್ ಕೇಜ್ರಿವಾಲ್, ಮಾಜಿ ಸಚಿವರಾದ ಸತ್ಯೇಂದ್ರ ಜೈನ್, ಮನೀಶ್ ಸಿಸೋಡಿಯ ಬಂಧಿತರಾಗಿ ಜೈಲಿನಲ್ಲಿದ್ದಾರೆ. ಪಕ್ಷದ ಇತರೆ ಮುಖಂಡರ ವಿರುದ್ಧ ಮದ್ಯ ಹಗರಣ, ಜಲ ಮಂಡಳಿ ಹಗರಣ ಸೇರಿ ಭ್ರಷ್ಟಾಚಾರದ ಆರೋಪಗಳಿವೆ. ಇಂತಹವರ ಜೊತೆ ನಮ್ಮ ಮೈತ್ರಿ ಸರಿಯಲ್ಲ, ಹಾಗಾಗಿ ರಾಜೀನಾಮೆ ನೀಡುತ್ತಿದ್ದೇವೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ಕಳೆದ ವಾರ ದೆಹಲಿ ಕಾಂಗ್ರೆಸ್ ಅಧ್ಯಕ್ಷರೂ ರಾಜೀನಾಮೆ ನೀಡಿದ್ದರು.

ಮೋದಿ ಪರಿವಾರ ಸೇರಿದರೆ ಅಪರಾಧಿಗೆ ರಕ್ಷೆ: ರಾಹುಲ್

ದೆಹಲಿ: ಜೆಡಿಎಸ್ ಪಕ್ಷದ ನಾಯಕ, ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ಕಿರುಕುಳ ಆರೋಪ ಸಂಬಂಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಮೋದಿ ಅವರ ರಾಜಕೀಯ ಪರಿವಾರದ ಭಾಗವಾದರೆ ಅಪರಾಧಿಗಳಿಗೆ ರಕ್ಷಣೆ ಗ್ಯಾರಂಟಿ ನೀಡಲಾಗುತ್ತದೆಯೇ? ಎಂದು ಪ್ರಶ್ನಿಸಿದರು.ಕರ್ನಾಟಕದಲ್ಲಿ ಮಹಿಳೆಯರ ವಿರುದ್ಧದ ಘೋರ ಅಪರಾಧಗಳ ಬಗ್ಗೆ ಪ್ರಧಾನಿ ಮೋದಿ ಮೌನವ ಹಿಸಿದ್ದಾರೆ. ಇದು ನಾಚಿಕೆಗೇಡು. ಪ್ರಕರಣ ಸಂಬಂಧ ಪ್ರಧಾನಿ ಉತ್ತರಿಸಬೇಕು. ಎಲ್ಲ ಗೊತ್ತಿದ್ದೂ ನೂರಾರು ಹೆಣ್ಣುಮಕ್ಕಳನ್ನು ಶೋಷಿಸಿದ ದೆವ್ವದ ಪರ ಮೋದಿ ಪ್ರಚಾರ ಮಾಡಿದ್ದೇಕೆ? ಆರೋಪಿ ದೇಶದಿಂದ ಪರಾರಿಯಾಗಿದ್ದು ಹೇಗೆ? ಎಂದು ರಾಹುಲ್ ಪ್ರಶ್ನಿಸಿ ದ್ದಾರೆ. ಸ್ತ್ರೀಯರ ಮೇಲೆ ದೌರ್ಜನ್ಯವೆಸಗಿದ ಆರೋ ಪಿಗೆ ಪ್ರಧಾನಿಯ ಮೌನ ಬೆಂಬಲ ದೇಶಾದ್ಯಂತದ ಅಪರಾಧಿಗಳಿಗೆ ಧೈರ್ಯ ತುಂಬುತ್ತಿದೆ ಎಂದು ಟೀಕಿಸಿದ್ದಾರೆ.

ಅನುಪಮಾ ಧಾರಾವಾಹಿ ನಟಿ ರೂಪಾಲಿ ಬಿಜೆಪಿಗೆ

ದೆಹಲಿ: ಟಿವಿ ಧಾರಾವಾಹಿ 'ಅನುಪಮಾ' ನಟಿ ರೂಪಾಲಿ ಗಂಗೂಲಿ ರಾಜಕೀಯ ಪ್ರವೇಶಿಸಿದ್ದಾರೆ. ದೆಹಲಿಯಲ್ಲಿ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಬುಧವಾರ ಪಕ್ಷಕ್ಕೆ ನಟಿ ಸೇರ್ಪಡೆಯಾದರು. ರೂಪಾಲಿ ಅವರನ್ನು ಪಕ್ಷದ ಮುಖಂಡ ವಿನೋದ್ ತಾವ್ಡೆ, ಅನಿಲ್ ಬಲು ನಿ ಸ್ವಾಗತಿಸಿದರು. ನಂತರ ಮಾತನಾಡಿದ ರೂಪಾಲಿ, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವ ದೇಶದಲ್ಲಿ ಆಗುತ್ತಿರುವ ಅಭಿ ವೃದ್ಧಿ ಕಾರ್ಯಗಳಿಂದ ಪ್ರಭಾವಿತಳಾಗಿ ಬಿಜೆಪಿ ಸೇರಿ ದೆ. ಅಭಿವೃದ್ಧಿಯ ಮಹಾಯಜ್ಞ ನೋಡಿದಾಗ ನನಗೂ ಪಾಲ್ಗೊಳ್ಳಬೇಕು ಎಂದೆನಿಸಿತು. ನಾನು ಎಂದಿಗೂ ಸರಿ ಯಾದುದನ್ನೇ, ಒಳ್ಳೆಯದನ್ನೇ ಮಾಡುವಂತೆ ನಿಮ್ಮ ಆಶೀರ್ವಾದ-ಬೆಂಬಲ ಬೇಕು ಎಂದು ಹೇಳಿದರು.ಸಿನಿಮಾ ನಿರ್ದೇಶಕ ಅನಿಲ್ ಗಂಗೂಲಿ ಅವರ ಪುತ್ರಿ, ರೂಪಾಲಿ ಮಾರ್ಚ್‌ನಲ್ಲಿ ಪ್ರಧಾನಿ ಮೋದಿ ಅವರನ್ನು ಭೇಟಿಯಾಗಿ, ಇದು ನನ್ನ ಜೀವನದ ಅತ್ಯಂತ ಸ್ಮರ ಣೀಯ ದಿನ ಎಂದು 'ಎಕ್ಸ್;ನಲ್ಲಿ ಸಂದೇಶ ಬರೆದಿ ದ್ದರು. 7ನೇ ವಯಸ್ಸಿಗೇ ವೃತ್ತಿ ಜೀವನ ಆರಂಭಿಸಿ 'ಸಾಹೇಬ್' ಚಿತ್ರದಲ್ಲಿ ಮೊದಲ ಪಾತ್ರ ನಿರ್ವಹಿಸಿ ದರು. 2013ರಲ್ಲಿ ಪರ್ವರಿಶ್, 2023ರಲ್ಲಿ ಸಂಜೀವಿನಿ ಎ ಮೆಡಿಕಲ್ ಬೂನ್, ಅನುಪಮಾ ಧಾರಾವಾಹಿಗಳು, ಸಾರಾ ಭಾಯ್ ಷೋ, ಬಿಗ್‌ಬಾಸ್-1ರಲ್ಲಿ ಭಾಗವಹಿಸಿದ್ದರು.



ಕೆಸಿಆರ್‌ಗೆ 48 ಗಂಟೆ ಪ್ರಚಾರ ನಿರ್ಬಂಧ

ದೆಹಲಿ: ತೆಲಂಗಾಣದ ಮಾಜಿ ಮುಖ್ಯಮಂತ್ರಿ, ಭಾರತ ರಾಷ್ಟ್ರ ಸಮಿತಿ(ಬಿಆರ್‌ಎಸ್) ಮುಖ್ಯಸ್ಥ ಕೆ.ಚಂದ್ರಶೇಖರ ರಾವ್ ಅವರಿಗೆ ಮುಂದಿನ 48 ಗಂಟೆಗಳ ಕಾಲ ಚುನಾವಣಾ ಪ್ರಚಾರದಲ್ಲಿ ಭಾಗಿ ಯಗುವುದನ್ನು ನಿರ್ಬಂಧಿಸಿ ಚುನಾವಣಾ ಆಯೋಗ ಬುಧ ವಾರ ಆದೇಶ ಹೊರಡಿಸಿದೆ.ಚುನಾವಣಾ ಪ್ರಚಾರ ವೇಳೆ ಕಾಂಗ್ರೆಸ್ ಪಕ್ಷದ ವಿರುದ್ಧ ಅಪ ಮಾನಕಾರಿಯಾಗಿ ಮಾತನಾಡಿದ ಹಾಗೂ ಆಕ್ಷೇಪಾರ್ಹ ಪದಗಳನ್ನು ಬಳಸಿದ ಆರೋಪ ದಡಿ ಹಾಗೂ ಸಂವಿಧಾನದ ವಿಧಿ 324ರಲ್ಲಿರುವಂತೆ ಚುನಾವಣಾ ಆಯೋಗ ನಿರ್ಬಂಧ ಕ್ರಮ ಜರುಗಿಸಿದೆ. 2 ದಿನಗಳ ಕಾಲ ಯಾವುದೇ ಸಾರ್ವಜನಿಕ ಸಭೆಗಳಲ್ಲಿ ಭಾಗಿಯಾಗಬಾರದು, ರೋಡ್ ಷೋ ನಡೆಸುವಂತಿಲ್ಲ, ಸಾರ್ವಜನಿಕ ರ‍್ಯಾಲಿ ಕೈಗೊಳ್ಳುವಂತಿಲ್ಲ. ಮುದ್ರಣ- ವಿದ್ಯುನ್ಮಾನ-ಸಾಮಾಜಿಕ ಮಾಧ್ಯಮಗಳಿಗೆ ಸಂದರ್ಶನ ನೀಡುವಂತಿಲ್ಲ ಎಂದು ಆಯೋಗದ ಆದೇಶದಲ್ಲಿ ತಿಳಿಸಲಾಗಿದೆ. ಈ ನಿರ್ಬಂಧ ಆದೇಶ ಮೇ 1ರ ರಾತ್ರಿ 8 ಗಂಟೆಯಿಂದ ನಂತರದ 48 ಗಂಟೆಗಳವರೆಗೂ ಜಾರಿಯಲ್ಲಿರಲಿದೆ ಎಂದು ಆಯೋಗ ತಿಳಿಸಿದೆ.

10 ವರ್ಷಕ್ಕೇ ಬಿಜೆಪಿ ಶ್ರೀಮಂತ ಪಕ್ಷ: ಟೀಕೆ

ಧುಬ್ರಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಅಧಿಕಾರಕ್ಕೇರಿದ ಬಿಜೆಪಿ, ಕೇವಲ 10 ವರ್ಷಗಳಷ್ಟು ಕಡಿಮೆ ಅವಧಿಯಲ್ಲೇ ಜಗತ್ತಿನ ಅತ್ಯಂತ ಶ್ರೀಮಂತ ಪಕ್ಷವೆನಿಸಿಕೊಂಡಿದೆ. ಇದಕ್ಕೆಲ್ಲಾ ಚುನಾವಣಾ ಬಾಂಡ್‌ಗಳ ಮ್ಯಾಜಿಕ್ ಕಾರಣವಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾದ್ರಾ ಟೀಕಾ ಪ್ರಹಾರ ನಡೆಸಿದ್ದಾರೆ. ಅಸ್ಸಾಂ ರಾಜ್ಯದ ಧುಬ್ರಿಯಲ್ಲಿ ಬುಧವಾರ ಚುನಾವಣಾ ಪ್ರಚಾರ ಕೈಗೊಂಡಿದ್ದ ಅವರು, ಕಾಂಗ್ರೆಸ್ 70 ವರ್ಷಗಳಷ್ಟು ದೀರ್ಘ ಅವಧಿಯಲ್ಲೂ ಗಳಿಸಲಾರದಷ್ಟನ್ನು ಬಿಜೆಪಿ 10 ವರ್ಷಗಳಲ್ಲೇ ಗಳಿಸಿದ್ದು ಹೇಗೆ ಎಂದು ಪ್ರಶ್ನಿಸಿದರು. ಬಿಜೆಪಿ ಸರಕಾರ ಹಲವು ಹಗರಣಗಳನ್ನು ನಡೆಸಿ ಆರ್ಥಿಕ ಸ್ಥಿತಿ ಹೆಚ್ಚಿಸಿಕೊಂಡಿದೆ ಎಂಬುದಕ್ಕೆ ಅಸ್ಸಾಂನಲ್ಲಿರುವ ಹಿಮಂತ ಬಿಸ್ವಶರ್ಮಾ ಆಡಳಿತ ಶೈಲಿಯೇ ಸಾಕ್ಷಿ ಎಂದರು.

ಕಾಂಗ್ರೆಸ್‌ಗೆ ಕಗ್ಗಂಟಾಗಿರುವ ಅಮೇಥಿ, ರಾಯ್‌ಬರೇಲಿ!

ನೆಹರು ವಂಶದ ವಶದಲ್ಲೇ ಉಳಿದಿದ್ದ ಎರಡು ಲೋಕಸಭಾ ಕ್ಷೇತ್ರಗಳು | ಗುರುವಾರ ಮಧ್ಯಾಹ್ನ ವೇಳೆಗೆ ಅಭ್ಯರ್ಥಿ ಆಯ್ಕೆ ಪ್ರಕಟ: ಕಾಂಗ್ರೆಸ್ | ಉ.ಪ್ರದೇಶ: ರಾಹುಲ್ ಸ್ಪರ್ಧೆ ಅನುಮಾನ; ಪ್ರಿಯಾಂಕಾ ನಿರಾಸಕ್ತಿ

ದೆಹಲಿ: ಲೋಕಸಭಾ ಚುನಾವಣೆಯ 5ನೇ ಹಂತದಲ್ಲಿ ಉತ್ತರ ಪ್ರದೇಶದಲ್ಲಿನ ಪ್ರತಿಷ್ಠಿತ ಲೋಕಸಭಾ ಕ್ಷೇತ್ರಗಳಾದ ಅಮೇಥಿ ಮತ್ತು ರಾಯ್‌ಬರೇಲಿಯಲ್ಲಿ ಚುನಾವಣೆ ನಡೆಯಲಿದೆ. ಅದಾಗಲೇ ಅಧಿಸೂ ಚನೆ ಪ್ರಕಟವಾಗಿದೆ.

ಅಲ್ಲದೇ ನಾಮ ಪತ್ರ ಸಲ್ಲಿಕೆಗೆ ಮೇ 3 ಕಡೆ ದಿನವಾ ಗಿದೆ. ಹಾಗಿದ್ದರೂ ಕಾಂಗ್ರೆಸ್ ಪಕ್ಷ ಮಾತ್ರ ಇನ್ನೂ ಅಮೇಥಿ ಮತ್ತು ರಾಯ್‌ಬರೇಲಿ ಲೋಕಸಭಾ ಕ್ಷೇತ್ರ ಗಳಿಗೆ ಅಭ್ಯರ್ಥಿಯನ್ನೇ ಅಂತಿಮ ಗೊಳಿಸಿಲ್ಲ.

ಆದರೆ, ಅಮೇಥಿ ಲೋಕಸಭಾ ಕ್ಷೇತ್ರದಲ್ಲಿನ ಬಿಜೆಪಿ ಅಭ್ಯರ್ಥಿ, ಕೇಂದ್ರ ಸಚಿವೆ ಸ್ಮೃತಿ ಇರಾನಿ ಸೋಮವಾರ ನಾಮಪತ್ರ ಸಲ್ಲಿಸಿಯಾಗಿದೆ. ನಾಮಪತ್ರ ಸಲ್ಲಿಸಲು ಇನ್ನೆರಡೇ ದಿನ ವಷ್ಟೇ ಬಾಕಿ ಇದೆ. ಹಾಗಿದ್ದೂ ಕಾಂಗ್ರೆಸ್ ಪಕ್ಷದಲ್ಲಿನ್ನೂ ಪ್ರತಿಷ್ಠಿತ ಕ್ಷೇತ್ರಗಳಿಗೆ ಅಭ್ಯರ್ಥಿಗಳೇ ಅಂತಿಮಗೊಂಡಿಲ್ಲ!

ದೆಹಲಿಯ ಎಐಸಿಸಿ ಕೇಂದ್ರ ಕಚೇರಿಯಲ್ಲಿ ಬುಧವಾರ ಮಧ್ಯಾಹ್ನ ಪತ್ರಿಕಾಗೋಷ್ಠಿ ನಡೆಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರನ್ನು ಅಮೇಥಿ ಮತ್ತು ರಾಯ್‌ಬರೇಲಿ ಕ್ಷೇತ್ರಗಳಿಗೆ ಕಾಂಗ್ರೆಸ್ ಅಭ್ಯರ್ಥಿ ಯಾರು? ಎಂದು ಪ್ರಶ್ನಿಸಲಾಯಿತು. ಈ ವಿಚಾರ ಇನ್ನೂ ಚರ್ಚೆಯಲ್ಲಿದೆ. ಮುಂದಿನ 24-30 ಗಂಟೆಗಳಲ್ಲಿ ಅಭ್ಯರ್ಥಿಗಳ ಘೋಷಣೆ ಮಾಡಲಾಗುವುದು ಎಂದು ಉತ್ತರಿಸಿದರು.

ಪಕ್ಷದ ಕೇಂದ್ರ ಚುನಾವಣಾ ಸಮಿತಿ (ಸಿಇಸಿ) ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅಮೇಥಿ, ರಾಯ್‌ಬರೇಲಿ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಅಧಿಕಾರವನ್ನು ನೀಡಲಾಗಿದೆ. ಗುರುವಾರ ಮಧ್ಯಾಹ್ನದ ವೇಳೆಗೆ ಅಭ್ಯರ್ಥಿ ಪ್ರಕಟಿಸಾಗುವುದು ಎಂದು ತಿಳಿಸಿದ್ದಾರೆ.

ನಿರ್ಧಾರ ತೆಗೆದುಕೊಳ್ಳುವಲ್ಲಿ ವಿಳಂಬ ಏಕೆ ಮತ್ತು ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರನ್ನು ಕಣಕ್ಕಿಳಿಸಲು ಕಾಂಗ್ರೆಸ್ ಹೆದರಿಕೆ ಹೊಂದಿದೆಯೇ? ಎಂಬ ಸುದ್ದಿಗಾರರ ಪ್ರಶ್ನೆಗೆ, 'ಯಾರೂ ಯಾರಿಗೂ ಹೆದರುವ ಪ್ರಶ್ನೆಯೇ ಇಲ್ಲ. ಚರ್ಚೆಗಳು ನಡೆಯುತ್ತಿವೆ, ಅಂತಿಮ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಪಕ್ಷದ ಅಧ್ಯಕ್ಷ ಖರ್ಗೆ ಅವರಿಗೆ ನೀಡಲಾಗಿದೆ' ಎಂದಷ್ಟೇ ರಮೇಶ್ ಉತ್ತರಿಸಿದ್ದಾರೆ.

ಅಮೇಥಿ ಕ್ಷೇತ್ರ ಮಹಿಮೆ

- 1967ರಿಂದ ಬಹುತೇಕ ಕಾಂಗ್ರೆಸ್‌ನದ್ದೇ ಪ್ರಾಬಲ್ಯ
- 1977 ಜನತಾ ಪಕ್ಷದ ರವೀಂದ್ರ ಪ್ರತಾಪ್ ಸಿಂಗ್
- 1997 ಬಿಜೆಪಿಯ ಸಂಜಯ ಸಿನ್ಹಾಗೆ ಗೆಲುವು
- 1999 ಕಾಂಗ್ರೆಸ್‌ನ ಸೋನಿಯಾ ಗಾಂಧಿ ಆಯ್ಕೆ
- 2004 ರಿಂದ 2014 ರಾಹುಲ್ ಗಾಂಧಿ ಸತತ ಗೆಲುವು
- 2019ರಲ್ಲಿ ಬಿಜೆಪಿ ಸ್ಮೃತಿ ಇರಾನಿಗೆ ಭರ್ಜರಿ ಗೆಲುವು
- 2014 ಬಿಜೆಪಿಯಿಂದ ಸ್ಮೃತಿ ಇರಾನಿ-ಕಾಂಗ್ರೆಸ್ ?



ರಾಯ್‌ಬರೇಲಿ ಕ್ಷೇತ್ರ

- 1967 ರಿಂದ 1977 : ಇಂದಿರಾ ಗಾಂಧಿ ಸಂಸದೆ
- 1977 ಜನತಾ ಪಕ್ಷದ ರಾಜ್‌ನಾರಾಯಣ್ ಗೆಲುವು
- 1996 -1998 ಬಿಜೆಪಿ ಅಶೋಕ್ ಸಿಂಗ್ ಸಂಸದ
- 1999 ಕಾಂಗ್ರೆಸ್ ಪಕ್ಷದ ಸತೀಶ್ ಶರ್ಮಾ ಆಯ್ಕೆ
- 2004 ರಿಂದ 2024: ಸೋನಿಯಾ ಗಾಂಧಿ ಸಂಸದೆ

ಎರಡೂ ಕ್ಷೇತ್ರ, ನೆಹರು ವಂಶದ ಪ್ರತಿಷ್ಠೆ

ನೆಹರು ಕುಟುಂಬದ ಪ್ರಭಾವವಿರುವ ಈ ಎರಡೂ ಪ್ರತಿಷ್ಠಿತ ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿ ಆಯ್ಕೆ ಕಾಂಗ್ರೆಸ್ ಪಾಲಿಗೆ ಕಗ್ಗಂಟಾಗಿದೆ. ಪಕ್ಷದ ಸ್ಥಳೀಯ ಕಾರ್ಯಕರ್ತರು ನೆಹರು ಕುಟುಂಬದವರೇ ಸ್ಪರ್ಧೆ ಮಾಡಲಿ ಎಂದು ಆಶಿಸುತ್ತಿದ್ದರೆ, ಈ ಬಾರಿ ಅದು ಕೈಗೂಡುವುದು ಅನುಮಾನವಾಗಿದೆ. 2019ರ ಚುನಾವಣೆಯಲ್ಲಿ ಅಮೇಥಿ ಕ್ಷೇತ್ರದಲ್ಲಿ ರಾಹುಲ್ ಗಾಂಧಿ ಸ್ಪರ್ಧಿಸಿ ಬಿಜೆಪಿಯ ಸ್ಮೃತಿ ಇರಾನಿ ಎದುರು ಸೋತಿದ್ದರು. ಆದರೆ, ಕೇರಳದ ವಯನಾಡಲ್ಲಿ ವಿಜಯಿಯಾಗಿದ್ದರು. ಈ ಬಾರಿಯೂ ರಾಹುಲ್ ಗಾಂಧಿ ಅವರೇ ಸ್ಪರ್ಧೆ ಮಾಡಲಿ ಎಂಬುದು ಅಮೇಥಿಯಲ್ಲಿನ ಕಾಂಗ್ರೆಸ್ ನಾಯಕರು, ಕಾರ್ಯಕರ್ತರ ಅಭಿಲಾಷೆಯಾಗಿದೆ. ಆದರೆ, ರಾಹುಲ್ ಮನಸ್ಸು ಮಾಡಿಲ್ಲ ಎಂದು ಮೂಲಗಳಿಂದ ತಿಳಿದುಬಂದಿದೆ. ಇದೇ ವೇಳೆ, ಪ್ರಿಯಾಂಕಾ ವಾದ್ರಾ, ಅವರ ಪತಿ ರಾಬರ್ಟ್ ವಾದ್ರಾ ಅವರು ಕ್ಷೇತ್ರದ ಮೇಲೆ ಕಣ್ಣಿಟ್ಟಿದ್ದಾರೆ. ಆದರೆ, ಪಕ್ಷದ ನಿಲುವೇನಿದೆ? ಎಂಬುದೇ ಕುತೂಹಲದ ಪ್ರಶ್ನೆಯಾಗಿದೆ. ಸೋನಿಯಾ ಗಾಂಧಿ ಅವರನ್ನು ಸತತವಾಗಿ ಗೆಲ್ಲಿಸಿ ಸಂಸತ್ತಿಗೆ ಕಳುಹಿಸಿಕೊಟ್ಟಿದ್ದ ಕ್ಷೇತ್ರ ರಾಯ್‌ಬರೇಲಿ. ವಯಸ್ಸಿನ ಕಾರಣದಿಂದಾಗಿ ಚುನಾವಣಾ ರಾಜಕಾರಣದಿಂದ ಹಿಂದೆ ಸರಿದ ಕಾಂಗ್ರೆಸ್ ನಾಯಕಿ ಸೋನಿಯಾ ಅವರು ರಾಜ್ಯಸಭೆಗೆ ಆಯ್ಕೆಯಾದರು. ಹಾಗಾಗಿ, ರಾಯ್‌ಬರೇಲಿ ಕ್ಷೇತ್ರದಲ್ಲಿ ಪ್ರಿಯಾಂಕಾ ವಾದ್ರಾ ಅವರು ಸ್ಪರ್ಧೆ ಮಾಡಲಿದ್ದಾರೆ. ಆ ಮೂಲಕ ತಾಯಿಯ ಕ್ಷೇತ್ರವನ್ನು ನೆಹರು ಕುಟುಂಬದ ವಶದಲ್ಲೇ ಇರುವಂತೆ ನೋಡಿಕೊಳ್ಳಲಿದ್ದಾರೆ ಎನ್ನಲಾಗಿತ್ತು. ಆದರೆ, ಈಗ ಪ್ರಿಯಾಂಕಾ ಅವರೂ ಸ್ಪರ್ಧೆಗೆ ಹಿಂದೇಟು ಹಾಕಿದ್ದಾರೆ ಎಂದು ತಿಳಿದುಬಂದಿದೆ. ಸದ್ಯದ ಪರಿಸ್ಥಿತಿಯಲ್ಲಿ ಅಮೇಥಿ ಮತ್ತು ರಾಯ್‌ಬರೇಲಿ ಲೋಕಸಭಾ ಕ್ಷೇತ್ರಗಳಲ್ಲಿ ನೆಹರು ವಂಶಕ್ಕೆ ಹೊರತಾದವರು ಸ್ಪರ್ಧೆ ಮಾಡುವ ಸಾಧ್ಯತೆಯೇ ಹೆಚ್ಚಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಶಾ ಹೇಳಿಕೆ ನಕಲಿ ವಿಡಿಯೊ ಕೈ ಅಧ್ಯಕ್ಷಗೆ ನೋಟಿಸ್

ದೆಹಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ರಾಂಚಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತೆಲಂಗಾಣದಲ್ಲಿ ಮುಸ್ಲಿಮರಿಗೆ ಕಾಂಗ್ರೆಸ್ ಆಡಳಿತದ ಕೆಲವು ರಾಜ್ಯಗಳು ಮೀಸಲು ಸೌಲಭ್ಯ ನೀಡಿರುವುದನ್ನು ಬಿಜೆಪಿ ರದ್ದುಗೊಳಿ ಸಲಿದೆ ಎಂದು ಹೇಳಿ ದ್ದನ್ನು ತಿರುಚಿ, ಇಡೀ ಮೀಸಲು ಸೌಲಭ್ಯ ವನ್ನೇ ರದ್ದುಗೊಳಿಸು ವುದಾಗಿ ಹೇಳಿರುವಂತೆ ನಕಲಿ ವಿಡಿಯೊ ಸೃಷ್ಟಿಸಿ ವೈರಲ್ ಮಾಡಿದ ಪ್ರಕರಣದಲ್ಲಿ ಮುಖ್ಯಮಂತ್ರಿ ಸೇರಿದಂತೆ ಕಾಂಗ್ರೆಸ್ ಪಕ್ಷದ ನಾಯಕರಿಗೆ ಕಾನೂನು ಸಮಸ್ಯೆ ಎದುರಾಗುವುದು ಮುಂದುವರಿದೇ ಇದೆ.

ಜಾರ್ಖಂಡ್ ರಾಜ್ಯದ ಕಾಂಗ್ರೆಸ್ ಘಟಕದ ಅಧ್ಯಕ್ಷ ರಾಜೇಶ್ ಠಾಕೂರ್ ನಕಲಿ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವುದಕ್ಕೆ ದೆಹಲಿ ಪೊಲೀಸರು ಬುಧವಾರ ನೋಟಿಸ್ ಜಾರಿ ಮಾಡಿದ್ದಾರೆ. ಲ್ಯಾಪ್‌ಟಾಪ್, ಸ್ಮಾರ್ಟ್‌ಫೋನ್ ಸೇರಿದಂತೆ ಸ್ವಂತದ ಡಿಜಿಟಲ್ ಗ್ಯಾಜೆಟ್‌ಗಳೊಂದಿಗೆ ದೆಹಲಿಯ ಪೊಲೀಸ್ ಠಾಣೆಗೆ ಗುರುವಾರ ವಿಚಾರಣೆಗೆ ಬರುವಂತೆ ಸೂಚನೆ ನೀಡಲಾಗಿದೆ.

ಇನ್ನೊಂದೆಡೆ, ಕಾಶ್ಮೀರದ ಬುದ್ಗಾಂ ಜಿಲ್ಲೆಯ ನಿವಾಸಿ ಮಹಮ್ಮದ್ ಇಲ್ಯಾಸ್ ಹುಸೇನ್ ಮಿರ್ ಎಂಬವರು ಕೂಡಾ ಇದೇ ನಕಲಿ ವಿಡಿಯೊ ಹಂಚಿಕೊಂಡಿದ್ದಾರೆ. ಅವರ ವಿರುದ್ಧವೂ ಕಾಶ್ಮೀರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ರೇವಂತ್ ರೆಡ್ಡಿ ಪರ ವಕೀಲರ ಹಾಜರಿ

ಅಮಿತ್ ಶಾ ಅವರ ಹೇಳಿಕೆ ತಿರುಚಿ ಸಿದ್ಧಪಡಿಸಿದ ನಕಲಿ ವಿಡಿಯೊ ಹಂಚಿ ಕೊಂಡ ಆರೋಪದಡಿ ದೆಹಲಿ ಪೊಲೀ ಸರು ಪ್ರಕರಣ ದಾಖಲಿಸಿ ವಿಚಾರಣೆಗೆ ಹಾಜರಾಗಲು ತೆಲಂಗಾಣ ಮುಖ್ಯ ಮಂತ್ರಿ ರೇವಂತ್ ರೆಡ್ಡಿ ಅವರಿಗೆ ಸಿಆರ್‌ಪಿಸಿ ಕಲಂ 160/91ರ ಅನ್ವಯ ನೋಟಿಸ್ ನೀಡಿದ್ದರು. ರೆಡ್ಡಿ ಅವರ ಪರವಾಗಿ ವಕೀಲರು ದೆಹಲಿ ಪೊಲೀಸ ರೆದುರು ಬುಧವಾರ ಹಾಜರಾಗಿ ಪ್ರತಿಕ್ರಿಯಿಸಲು ಕಾಲಾವಕಾಶ ಕೋರಿದ್ದಾರೆ ಎಂದು ತಿಳಿದುಬಂದಿದೆ.

ಅಧೀರ್ ರಂಜನ್ ಚೌಧರಿ ಬಿಜೆಪಿ ಬಿ ಟೀಂ: ಮಮತಾ

ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಕಿಡಿನುಡಿ

ದೆಹಲಿ: 27 ಸಮಾನ ಮನಸ್ಕ ಪಕ್ಷಗಳ ಒಕ್ಕೂಟವಾದ 'ಇಂಡಿಯ'ದಲ್ಲಿನ ಮಿತ್ರಪಕ್ಷಗಳ ಕಿತ್ತಾಟ ಮುಂದುವರಿದೇ ಇದೆ. ಪಶ್ಚಿಮ ಬಂಗಾಳದಲ್ಲಂತೂ ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್(ಟಿಎಂಸಿ) ಶರಂಪರ ಕಿತ್ತಾಡಿಕೊಳ್ಳುತ್ತಿವೆ.

ಕಾಂಗ್ರೆಸ್‌ನ ಪಶ್ಚಿಮ ಬಂಗಾಳದ ಮುಖ್ಯಸ್ಥ, ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕರೂ ಆಗಿದ್ದ ಸಂಸದ ಅಧೀರ್ ರಂಜನ್ ಚೌಧರಿ ಕಾಂಗ್ರೆಸ್‌ನ ಬಹರಾಂಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಚುನಾವಣಾ ಉಸ್ತುವಾರಿಯನ್ನೂ ವಹಿಸಿಕೊಂಡಿರುವ ಅಧೀರ್ ಅವರನ್ನು 'ಬಿಜೆಪಿಯ ಬಿ ಟೀಂ' ಎಂದು ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಹೆಸರಿಸಿದ್ದಾರೆ.

'ಈ ಬಾರಿ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳಿಗೇ ಮತ ಹಾಕಿರಿ. ಒಂದೊಮ್ಮೆ ಜಾತ್ಯತೀತ ಪಕ್ಷಗಳಿಗೆ ಮತ ಹಾಕಲು ನಿಮಗೆ ಇಷ್ಟವಿಲ್ಲದೇ ಇದ್ದರೆ, ದಯಮಾಡಿ ಯಾರೂ ತೃಣಮೂಲ ಕಾಂಗ್ರೆಸ್(ಟಿಎಂಸಿ)ಗೆ ಮಾತ್ರ ಮತ ಹಾಕಿದರೆ ಅದು ಬಿಜೆಪಿಗೇ ಮತ ಚಲಾಯಿಸಿದಂತೆ. ಅದಕ್ಕೆ ಬದಲಾಗಿ ನೇರ ಬಿಜೆಪಿಗೇ ಓಟು ಹಾಕಿರಿ. ಯಾವುದೇ ಕಾರಣಕ್ಕೂ ಟಿಎಂಸಿಗೆ ಮಾತ್ರ ಮತ ಹಾಕಬೇಡಿ' ಎಂದು ಅಧೀರ್ ಹೇಳಿರುವ ವಿಡಿಯೊವನ್ನು ಮಮತಾ ತಮ್ಮ ಮಾತಿಗೆ ಸಾಕ್ಷಿಯಾಗಿ ತೋರಿಸಿದ್ದಾರೆ.

ಇಂಥ ನಕಾರಾತ್ಮಕ ಧೋರಣೆಯ ವ್ಯಕ್ತಿಯಿಂದಾಗಿಯೆ ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಮತ್ತು ಕಾಂಗ್ರೆಸ್ ನಡುವಿನ ಕ್ಷೇತ್ರ ಹಂಚಿಕೆ ಮಾತುಕತೆ ಹಾದಿತಪ್ಪಿತು. ಇವರೊಬ್ಬರು ಪಶ್ಚಿಮ ಬಂಗಾಳ ವಿರೋಧಿ ರಾಜಕಾರಣಿ ಎಂದೂ ಮಮತಾ ಕಿಡಿಕಾರಿದ್ದಾರೆ.

ರಾಯ್‌ಬರೇಲಿಯಿಂದ ವರುಣ್ ಗಾಂಧಿ ಕಣಕ್ಕೆ?

ಈವರೆಗೂ ಅಭ್ಯರ್ಥಿ ಪ್ರಕಟಿಸಿದ ಬಿಜೆಪಿಯಿಂದ ಭಿನ್ನ ತಂತ್ರ | ಪ್ರಿಯಾಂಕಾ ಸ್ಪರ್ಧಿಸಿದರೆ ನೆಹರು ವಂಶದವರೇ ಎದುರಾಳಿ!

ರಾಯ್‌ಬರೇಲಿ: ಉತ್ತರ ಪ್ರದೇಶದ 80 ಲೋಕಸಭಾ ಕ್ಷೇತ್ರಗಳಲ್ಲಿ ಹೆಚ್ಚು ಅವಧಿ ಕಾಂಗ್ರೆಸ್ ಪಕ್ಷಕ್ಕೇ ಮತ ನೀಡಿ ಗೆಲ್ಲಿಸುತ್ತಿದ್ದ ರಾಯ್‌ಬರೇಲಿ ಕ್ಷೇತ್ರದಲ್ಲಿ ಸೋನಿಯಾ ಗಾಂಧಿ ಅವರ ಗೈರು ಹಾಜರಿ ಎದ್ದು ಕಾಣುತ್ತಿದೆ.



ಯಾರನ್ನು ಅಭ್ಯರ್ಥಿ ಮಾಡುವುದು? ಎಂಬುದೇ ಕೈ ಪಾಳಯದ ಪಾಲಿಗೆ ದೊಡ್ಡ ಪ್ರಶ್ನೆಯಾಗಿದೆ. ಅಷ್ಟೇ ಅಲ್ಲ, ಬಿಜೆಪಿ ಕೂಡಾ ಈ ಕ್ಷೇತ್ರದ ಅಭ್ಯರ್ಥಿಯನ್ನಿನ್ನೂ ಪ್ರಕಟಿಸಿಯೇ ಇಲ್ಲ. ಕಾರಣ, ಕಾಂಗ್ರೆಸ್ ಯಾರನ್ನು ಕಣಕ್ಕಿಳಿಸಲಿದೆ ಎಂಬುದನ್ನು ನೋಡಿಕೊಂಡು ಅಭ್ಯರ್ಥಿಯನ್ನು ಆಖೈರುಗೊಳಿಸುವುದೇ ಬಿಜೆಪಿಯ ಚುನಾವಣಾ ತಂತ್ರವಾಗಿದೆ.

ಇದೇ ರಾಜ್ಯದ ಫಿಲಿಭಿತ್ ಲೋಕಸಭಾ ಕ್ಷೇತ್ರದಿಂದ ವರುಣ್ ಗಾಂಧಿಗೆ ಟಿಕೆಟ್ ನೀಡಲು ನಿರಾಕರಿಸಿದ ಬಿಜೆಪಿ ವರಿಷ್ಠರು, ಉತ್ತರ ಪ್ರದೇಶದ ಸಚಿವ ಜಿತಿನ್ ಪ್ರಸಾದ್ ಅವರನ್ನು ಕಣಕ್ಕಿಳಿಸಿದರು. ಬದಲಾಗಿ ವರುಣ್ ಗಾಂಧಿಯನ್ನು ಸ್ಟ್ಯಾಂಡ್‌ಬೈ ರೀತಿ ರಾಯ್‌ಬರೇಲಿ ಕ್ಷೇತ್ರಕ್ಕಾಗಿ ಕಾಯ್ದಿರಿಸಿಕೊಂಡಿದ್ದಾರೆ ಎಂಬ ಮಾತುಗಳು ಕಮಲ ಪಕ್ಷದಿಂದ ಕೇಳಿಬರುತ್ತಿವೆ.

ರಾಯ್‌ಬರೇಲಿಗೆ ವಿಶೇಷ -ಸಮರ್ಥ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಈ ಬಾರಿ ಕ್ಷೇತ್ರದಲ್ಲಿ ಗೆಲುವು ಸಾಧಿಸಲೇಬೇಕು ಎಂದುಕೊಂಡಿರುವ ಬಿಜೆಪಿ, ಚುನಾವಣಾ ಪೂರ್ವದಲ್ಲೇ ಕ್ಷೇತ್ರದಲ್ಲಿ ಸಮೀಕ್ಷೆ ನಡೆಸಿದೆ. ಅದರಿಂದ ಸಿಕ್ಕ ಅಂಕಿ ಅಂಶಗಳನ್ನು ಆಧರಿಸಿಯೇ ನೆಹರು ವಂಶಜ ವರುಣ್ ಗಾಂಧಿಯತ್ತ ಗಮನ ಕೇಂದ್ರೀಕರಿಸಿದೆ. ಪ್ರಿಯಾಂಕಾ ಗಾಂಧಿ ಕಣಕ್ಕಿಳಿದರೆ ಎದುರಾಳಿಯಾಗಿ ವರುಣ್ ಗಾಂಧಿಯನ್ನೇ ಹೂಡಲು ನಿರ್ಧರಿಸಿದೆ ಎಂದು ಕಮಲ ಪಕ್ಷದ ಮೂಲಗಳಿಂದ ತಿಳಿದುಬಂದಿದೆ.

ಕ್ಷೇತ್ರ ಸಮೀಕ್ಷೆ ನಡೆಸಿದ್ದು ನಿಜ. ಆದಷ್ಟೂ ಸೋಲುವುದನ್ನು ತಪ್ಪಿಸಿಕೊಳ್ಳಲು ಹಾಗೂ ಸಮರ್ಥ ಅಭ್ಯರ್ಥಿಯನ್ನು ಕಂಡುಕೊಳ್ಳುವ ಸಲುವಾಗಿ ಸಮೀಕ್ಷೆ ನಡೆಸಲಾಗಿತ್ತು. ಪಕ್ಷದವರೇ ಸಮೀಕ್ಷೆ ಕೈಗೊಂಡಿದ್ದರು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಬುದ್ಧಿಲಾಲ್ ತಿಳಿಸಿದ್ದಾರೆ.

ಹೆಚ್ಚು ಕಾಂಗ್ರೆಸ್ ವಶದಲ್ಲೇ ಇದ್ದ ಕ್ಷೇತ್ರ

ಫಿರೋಜ್ ಗಾಂಧಿ ಅವರಿಂದ ಆರಂಭಿಸಿ 1952ರಿಂದಲೂ ನೆಹರು ವಂಶಜರು ಮತ್ತು ಕಾಂಗ್ರೆಸ್ ಪಕ್ಷದವರನ್ನೇ ಗೆಲ್ಲಿಸುತ್ತಾ ಬಂದಿರುವ ರಾಯ್‌ಬರೇಲಿ ಕ್ಷೇತ್ರ, 1977 ಮತ್ತು 1996 ಹಾಗೂ 1998ರ ಚುನಾವಣೆಗಳಲ್ಲಿ ಮಾತ್ರ ಜನತಾ ಪಕ್ಷ ಮತ್ತು ಭಾರತೀಯ ಜನತಾ ಪಕ್ಷಕ್ಕೆ ಮಣೆ ಹಾಕಿದೆ. ಈಗ ಅಮ್ಮ ಸೋನಿಯಾ ಗಾಂಧಿ ತೊರೆದ ಕ್ಷೇತ್ರದಲ್ಲಿ ಪುತ್ರಿ ಪ್ರಿಯಾಂಕಾ ಗಾಂಧಿಯನ್ನು ಕಾಂಗ್ರೆಸ್ ಕಣಕ್ಕಿಳಿಸಲಿದೆ ಎಂಬ ನಿರೀಕ್ಷೆ ಇದ್ದುದರಿಂದ ಅವರಿಗೆ ಎದುರಾಳಿಯಾಗಿ ಅದೇ ನೆಹರು ವಂಶದ ಕುಡಿ ವರುಣ್ ಗಾಂಧಿಯನ್ನು ಕಣಕ್ಕಿಳಿಸಬೇಕೆಂಬುದು ಬಿಜೆಪಿ ಚುನಾವಣಾ ತಂತ್ರವಾಗಿದೆ.

ಮೋದಿ ಭಾಷಣ; ಮೈಕ್ ಪ್ರತಿಧ್ವನಿ!

ಸಂದರ್ಭೋಚಿತವಾಗಿ ಮಾತನಾಡುವುದ ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನಿಸ್ಸೀಮರು. ಮಹಾ ರಾಷ್ಟ್ರದ ಪುಣೆಯಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡುತ್ತಿದ್ದಾಗ 'ಧ್ವನಿವ ರ್ಧಕ'ದಿಂದ ಪ್ರತಿಧ್ವನಿ ಬರಲಾರಂ ಭಿಸಿತು. ತಕ್ಷಣವೇ ಮೋದಿ ಅವರು 'ನನ್ನ ಮಾತನ್ನು ಹೀಗೆ ಧ್ವನಿವರ್ಧಕದ ಮೂಲಕ ಪ್ರತಿಧ್ವನಿಸಬೇಕಾದ ಅಗತ್ಯವೇ ಇಲ್ಲ. ಏಕೆಂದರೆ ದೇಶದ 140 ಕೋಟಿ ಜನರೇ ನನ್ನ ಮಾತಿಗೆ ಪ್ರತಿಧ್ವನಿ ನೀಡುತ್ತಾರೆ' ಎಂದು ಸೂಚ್ಯವಾಗಿ ಹೇಳುವ ಮೂಲಕ ಧ್ವನಿವರ್ಧ ಕದ ಸಮಸ್ಯೆಯನ್ನು ಸಂಘಟಕರ ಗಮನಕ್ಕೆ ತಂದರು. ಬಳಿಕ ಸ್ವಲ್ಪ ಸಮಯದಲ್ಲೇ 'ಧ್ವನಿವರ್ಧಕ'ದ ಸಮಸ್ಯೆ ಬಗೆಹರಿಯಿತು.

ಚುನಾವಣೆ ಪ್ರಚಾರದಲ್ಲಿ ಹಾಡು-ರಂಜನೆ-ನೃತ್ಯ!

ಉತ್ತರ ಭಾರತದಲ್ಲಿ ಚುನಾವಣಾ ಪ್ರಚಾರ ಸಭೆಗಳು ದಕ್ಷಿಣ ಭಾರತದಲ್ಲಿ ನಡೆಯುವಂತೆ ಇರುವುದಿಲ್ಲ. ಸಭೆಯಲ್ಲಿ ಬರೀ ಉದ್ದುದ್ದ ಭಾಷಣ ಮಾಡಿದರೆ ಆಗುವುದಿಲ್ಲ. ಅಲ್ಲೆಲ್ಲಾ ಮತದಾರರು ಮತ್ತು ಪಕ್ಷದ ಬೆಂಬಲಿಗರನ್ನು ಖುಷಿ ಪಡಿಸಬೇಕೆಂದರೆ ಅಭ್ಯರ್ಥಿ ಅಥವಾ ಪಕ್ಷದ ನಾಯಕರು ಒಂದೋ ಹಾಡು ಹೇಳಿ ರಂಜಿಸಬೇಕು, ಇಲ್ಲವೇ ಮೈಕ್‌ನಲ್ಲಿ ಬರುವ ಹಾಡಿಗೆ ನರ್ತಿಸಬೇಕು. ಆಗಲೇ ಸಭೆಯಲ್ಲಿದ್ದ ಜನರಿಗೆ ಸಮಾಧಾನ. ಇಂಥ ರೂಢಿ ಬಿಹಾರ, ಉತ್ತರ ಪ್ರದೇಶದಲ್ಲಿಯೇ ಹೆಚ್ಚು. ಬಿಹಾರದಲ್ಲಿ ಮಾಜಿ ಡಿಸಿಎಂ ತೇಜಸ್ವಿ ಯಾದವ್ ಸೇರಿದಂತೆ ಆರ್‌ಜೆಡಿ ಪಕ್ಷದ ನಾಯಕರು, ಅಭ್ಯರ್ಥಿಗಳೆಲ್ಲಾ ಹಾಡು ಹೇಳುವ ರೂಢಿ ಇಟ್ಟುಕೊಂಡಿದ್ದಾರೆ. ಇದರ ಪ್ರಭಾವ ಪಶ್ಚಿಮ ಬಂಗಾಳಕ್ಕೂ ಹಬ್ಬಿದೆ. ಮೇದಿನಿಪುರ ಲೋಕಸಭಾ ಕ್ಷೇತ್ರದಲ್ಲಿನ ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಜೂನ್ ಮಲಿಯಾ ಚುನಾವಣಾ ರ‍್ಯಾಲಿ ನಡೆಸಿದ್ದಾಗ ಕಾರ್ಯಕರ್ತರ ಬೇಡಿಕೆ ಮೇರೆಗೆ ಹಾಡಿದ್ದಾರೆ. ಅವರು 'ಮೋದಿ ಜಿ ತುಮ್ ತೊ ಧೋಕೇಬಾಜ್ ಹೋ...' ಎಂದು 2 ಸಾಲು ಗುನುಗಿದ್ದಾರೆ. ಅಷ್ಟಕ್ಕೇ ಪಕ್ಷದ ಕಾರ್ಯಕರ್ತರು ಕೇಕೆ ಹಾಕಿ ಖುಷಿಪಟ್ಟಿದ್ದಾರೆ.

ಬಂಧನದಲ್ಲಿರುವ ರಾಜಕಾರಣಿಗೆ ಚುನಾವಣೆ ಪ್ರಚಾರ ಅವಕಾಶವಿಲ್ಲ

ದೆಹಲಿ ಹೈಕೋರ್ಟ್ ಸ್ಪಷ್ಟ ಅಭಿಮತ- ಅರ್ಜಿ ವಜಾ

ದೆಹಲಿ: ಬಂಧನದಲ್ಲಿರುವ ರಾಜಕೀಯ ನೇತಾರರಿಗೂ ಚುನಾವಣಾ ಪ್ರಚಾರದಲ್ಲಿ ವರ್ಚುವಲ್ ರೀತಿಯಲ್ಲಿ ಭಾಗಿಯಾಗಲು ಅವಕಾಶ ಮಾಡಿಕೊಡುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಬುಧವಾರ ವಜಾಗೊಳಿಸಿದೆ.

ಒಂದೊಮ್ಮೆ ಇಂಥ ಆದೇಶವನ್ನು ಚುನಾವಣಾ ಆಯೋಗಕ್ಕೆ ನೀಡಿದರೆ ನಟೋರಿಯಷ್ ಕ್ರಿಮಿನಲ್‌ಗಳು ಕೂಡಾ ಚುನಾವಣೆಗೆ ಮುನ್ನ ರಾಜಕೀಯ ಪಕ್ಷಗಳನ್ನು ಹುಟ್ಟುಹಾಕಿಬಿಡುತ್ತಾರೆ ಎಂದು ದೆಹಲಿ ಹೈಕೋರ್ಟ್‌ನ ಪ್ರಭಾರಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಮತ್ತು ನ್ಯಾ.ಮನಮೀತ್ ಪ್ರೀತಂ ಸಿಂಗ್ ಅರೋರಾ ಅವರ ದ್ವಿಸದಸ್ಯ ಪೀಠ ಅರ್ಜಿ ವಜಾಗೊಳಿಸುವ ವೇಳೆ ಅಭಿಪ್ರಾಯಪಟ್ಟಿದೆ.

ಇಂಥ ಅರ್ಜಿಗಳ ಸಲ್ಲಿಕೆಯೇ ದುಸ್ಸಾಹಸ ರೀತಿಯವು ಮತ್ತು ಕಾನೂನಿನ ಮೂಲ ಉದ್ದೇಶಕ್ಕೇ ವಿರುದ್ಧವಾದವು ಎಂದೂ ಪೀಠ ವ್ಯಾಖ್ಯಾನಿಸಿದೆ. ಅಲ್ಲದೇ, ಇಂಥ ನಿರ್ದೇಶನ ನೀಡುವ ಮೂಲಕ ಹೊಸತೇ ಕಾನೂನು ರಚನೆಯ ಕಾರ್ಯವನ್ನು ನ್ಯಾಯಾಲಯ ಮಾಡಲಾಗದು ಎಂದು ಪೀಠ ಹೇಳಿದೆ.

ಇಂಥ ಆದೇಶ ಹೊರಡಿಸಿಬಿಟ್ಟರೆ, ಭಾರತ ಸರಕಾರಕ್ಕೆ ಬೇಕಾಗಿರುವ ಘೋಷಿತ ಅಪರಾಧಿ ದಾವೂದ್ ಇಬ್ರಾಹಿಂ ಕೂಡಾ ರಾಜಕೀಯ ಪಕ್ಷ ಸ್ಥಾಪಿಸಿ, ಚುನಾವಣೆಗೆ ಸ್ಪರ್ಧಿಸಿಬಿಡುತ್ತಾನೆ. ಅತ್ಯಾಚಾರ, ಕೊಲೆ, ಸುಲಿಗೆ ಆರೋಪ ಹೊತ್ತವರೂ ಜೈಲು ಪಾಲಾಗುವುದನ್ನು ತಪ್ಪಿಸಿಕೊಳ್ಳಲು ರಾಜಕೀಯ ಪಕ್ಷ ಸ್ಥಾಪಿಸಿಬಿಡುತ್ತಾರೆ. ಹಾಗಾಗಿ, ಬಂಧನದಲ್ಲಿರುವ ರಾಜಕೀಯ ನಾಯಕರು ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಲು ಅವಕಾಶ ಮಾಡಿಕೊಡಲಾಗುವುದಿಲ್ಲ ಎಂದು ಪೀಠ ಸ್ಪಷ್ಟವಾಗಿ ಹೇಳಿದೆ.

ನ್ಯಾಯಾಂಗ ಬಂಧನದಲ್ಲಿರುವ ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್ ಪ್ರಕರಣವನ್ನು ಉದಾಹರಣೆಯಾಗಿಟ್ಟುಕೊಂಡು ಜಾಮೀಯಾ ಮಿಲ್ಲಿಯಾ ಇಸ್ಲಾಮಿಯಾ ಲಾ ಕಾಲೇಜಿನ ವಿದ್ಯಾರ್ಥಿ ಅಮರ್‌ಜೀತ್ ಗುಪ್ತಾ ಎಂಬವರು ಅರ್ಜಿ ಸಲ್ಲಿಸಿದ್ದರು.

ನೋಟಾಗೆ ಮತ ಹಾಕಿ: ಕಾಂಗ್ರೆಸ್

ಇಂದೋರ್: ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ 'ನೋಟಾ'ಗೆ ಮತ ಚಲಾಯಿಸುವಂತೆ ಮನವಿ ಮಾಡುತ್ತಿದೆ!.

ಹೌದು, ಮಧ್ಯಪ್ರದೇಶದ ಇಂದೋರ್ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕರು ಮತದಾರರಲ್ಲಿ 'ದಯವಿಟ್ಟು ನೋಟಾಗೆ ಮತ ಚಲಾಯಿಸಿ' ಎಂದು ಮನವಿ ಮಾಡುತ್ತಿದ್ದಾರೆ. ಕಾರಣ, ಕಾಂಗ್ರೆಸ್ ಅಭ್ಯರ್ಥಿ ಅಕ್ಷಯ್ ಕಾಂತಿ ಬಾಮ್ ಕಡೆಕ್ಷಣದಲ್ಲಿ ನಾಮಪತ್ರ ವಾಪಸ್ ಪಡೆದು ಬಿಜೆಪಿಗೆ ಸೇರ್ಪಡೆಗೊಂಡರು. ಹಾಗಾಗಿ, ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಅಭ್ಯರ್ಥಿಯೇ ಇಲ್ಲದಂತಾಗಿದೆ. ಅಲ್ಲದೇ, 'ಇಂಡಿಯ' ಒಕ್ಕೂಟ ಸದಸ್ಯ ಪಕ್ಷಗಳ ಅಭ್ಯರ್ಥಿಗಳೂ ಕಣದಲ್ಲಿ ಇಲ್ಲದ ಕಾರಣ, ಕಾಂಗ್ರೆಸ್ ನಾಯಕರು ಅನಿವಾರ್ಯವಾಗಿ 'ನೋಟಾ'ಗೆ ಮತ ಚಲಾಯಿಸುವಂತೆ ಮತದಾರರಲ್ಲಿ ಮನವಿ ಮಾಡುತ್ತಿದ್ದಾರೆ. ಸದ್ಯ ಬಿಜೆಪಿ ಅಭ್ಯರ್ಥಿ ಮತ್ತು ಕೆಲವು ಪಕ್ಷೇತರರಷ್ಟೇ ಕಣದಲ್ಲಿದ್ದಾರೆ. ಇಲ್ಲಿ ಬಿಜೆಪಿ ಗೆಲುವು ಸರಾಗ ಎನ್ನುವಂತಹ ಸ್ಥಿತಿ ಇದೆ.

ಚುನಾವಣೆ ಚುರುಮುರಿ

ಪ್ರಚಾರದಲ್ಲಿ ಯಾರು ಏನೆಂದರು?

ಬಿಜೆಪಿ ವಿರುದ್ಧ ಧ್ವನಿ ಎತ್ತಿದ್ದಕ್ಕೆ, ಬಿಜೆಪಿ ಕ್ರಮಗಳ ಬಗ್ಗೆ ಪ್ರಶ್ನೆ ಮಾಡಿದ್ದಕ್ಕೇ ನನ್ನ ವಿರುದ್ಧ ದೆಹಲಿ ಪೊಲೀಸರಲ್ಲಿ ಪ್ರಕರಣ ದಾಖಲಾಗುವಂತೆ ಮಾಡಲಾಗಿದೆ. ತೆಲಂಗಾಣದಲ್ಲಿನ ಪ್ರಚಾರ ಸಭೆಯಲ್ಲಿ ಅಮಿತ್ ಶಾ ಮಾತನಾಡಿದ್ದನ್ನು ಪ್ರಶ್ನಿಸಿದ್ದಕ್ಕೇ ನನ್ನ ವಿರುದ್ಧ ಬಿಜೆಪಿಯವರು ಕಾನೂನು ಕ್ರಮಕ್ಕೆ ಮುಂದಾಗಿದ್ದಾರೆ. ಅಮಿತ್ ಶಾ ಅವರು ಸೇಡಿನ ಮನೋಭಾವದವರಾಗಿದ್ದಾರೆ. ಇಂಥ ಬೆದರಿಕೆಗಳಿಗೆ ಬಗ್ಗುವುದಿಲ್ಲ. ದೆಹಲಿ ಸುಲ್ತಾನರು ಏನೇ ಮಾಡಿದರೂ ತೆಲಂಗಾಣದ ಪ್ರತಿಷ್ಠೆಗೆ ಧಕ್ಕೆಯಾಗುವುದಕ್ಕೆ ಬಿಡುವುದಿಲ್ಲ. ಪ್ರಧಾನಿ ಮೋದಿ, ಅಮಿತ್ ಶಾ ನಮ್ಮ ನೆಲದಲ್ಲಿ ನಿಂತು ನಮ್ಮ ವಿರುದ್ಧವೇ ಬೆದರಿಕೆ ಹಾಕಿದರೆ ನಾನಂತೂ ಹೆದರುವುದಿಲ್ಲ.

-ರೇವಂತ್ ರೆಡ್ಡಿ
ತೆಲಂಗಾಣ ಸಿಎಂ

ಬಡ ಕುಟುಂಬಗಳು ಹಲವು ಕಾರಣಗಳಿಂದ ಅಧಿಕ ಮಕ್ಕಳನ್ನು ಹೊಂದಿರುತ್ತವೆ. ನಾನೂ ಕೂಡಾ 5 ಮಕ್ಕಳನ್ನು ಹೊಂದಿರುವೆ. ಆದರೆ, ಪ್ರಧಾನಿ ಮೋದಿ ಜಾಸ್ತಿ ಮಕ್ಕಳನ್ನು ಹೊಂದಿರುವ ವಿಚಾರದಲ್ಲಿ ಕೇವಲ ಮುಸ್ಲಿಮರನ್ನೇ ಗುರಿಯಾಗಿಸಿ ವಾಗ್ದಾಳಿ ಮಾಡುತ್ತಿದ್ದಾರೆ. ಹಿಂದೂಗಳ ಆಸ್ತಿಯನ್ನು ಕಿತ್ತುಕೊಂಡು ಹೆಚ್ಚು ಮಕ್ಕಳಿರುವವರಿಗೆ (ಮುಸ್ಲಿಮರಿಗೆ) ಕಾಂಗ್ರೆಸ್ ಹಂಚುತ್ತದೆ ಎಂದು ಪ್ರಧಾನಿ ಮೋದಿ ಸುಳ್ಳು ಹೇಳುತ್ತಿದ್ದಾರೆ. ಪ್ರಧಾನಿ ಹುದ್ದೆಯಲ್ಲಿ ಇರುವವರ ಇಂಥ ನಡೆ ಸರಿಯಲ್ಲ.

-ಮಲ್ಲಿಕಾರ್ಜುನ ಖರ್ಗೆ
ಕಾಂಗ್ರೆಸ್ ಅಧ್ಯಕ್ಷ

ಕೇಂದ್ರ ಚುನಾವಣಾ ಆಯೋಗ ಪ್ರಸಕ್ತ ಲೋಕಸಭಾ ಚುನಾವಣೆಯ ಮೊದಲ ಮತ್ತು 2ನೇ ಹಂತದ ಮತದಾನದ ನಿಖರ ಅಂಕಿ ಅಂಶಗಳನ್ನು ಪ್ರಕಟಿಸಲು ಇಷ್ಟು ತಡ ಮಾಡಿದ್ದೇಕೆ? ಎರಡೂ ಹಂತಗಳಲ್ಲಿನ ಮತದಾನ ನಡೆಸಿದ ಮತದಾರರ ಸಂಖ್ಯೆ 2019ಕ್ಕಿಂತ ಅಧಿಕವಾಗಿದೆ ಎಂಬ ಅಂಕಿ ಅಂಶಗಳು ಸಂಶಯಕ್ಕೆ ಎಡೆಮಾಡಿಕೊಡುತ್ತವೆ. ಈ ಬಾರಿಯೂ ಮತಯಂತ್ರಗಳ(ಇವಿಎಂ) ಬಳಕೆಯಲ್ಲೇನಾದರೂ ಮ್ಯಾಜಿಕ್ ನಡೆದಿದೆಯೇ? ಮತದಾನದ ದಿನ ಚುನಾವಣಾ ಆಯೋಗ ಹೇಳಿದ ಶೇಕಡಾವಾರು ಮತ ಪ್ರಮಾಣಕ್ಕೂ ಈಗ ತಡವಾಗಿ ಬಿಡುಗಡೆ ಮಾಡಿದ ವರದಿಯಲ್ಲಿನ ಅಂಕಿ ಅಂಶಗಳಿಗೂ ಶೇ.5.75ರಷ್ಟು ಭಾರೀ ವ್ಯತ್ಯಯ ಕಾಣುತ್ತಿದೆ. ನಿಜಕ್ಕೂ ಇದು ಕಳವಳಕಾರಿಯಾಗಿದೆ. ಇವಿಎಂಗಳು ಬಹಳ ಸಮಯದವರೆಗೆ ಕಾಣೆಯಾಗಿದ್ದವು ಎಂಬ ಮಾತುಗಳೂ ಕೇಳಿಬಂದಿವೆ.

-ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಸಿಎಂ

ಪರಿಶಿಷ್ಟ ಜಾತಿ-ಪಂಗಡಗಳು, ಒಬಿಸಿಗೆ ನೀಡಿರುವ ಮೀಸಲು ರದ್ದುಗೊಳಿಸಲು, ಕಡಿಮೆ ಮಾಡಲು ಬಿಜೆಪಿ ಎಂದಿಗೂ ಅವಕಾಶ ನೀಡಲ್ಲ. ಅಲ್ಲದೇ ಈ ಸಮುದಾಯಗಳಿಂದ ಮೀಸಲು ಸೌಲಭ್ಯ ಕಸಿದು ಮುಸ್ಲಿಮರಿಗೆ ಕೊಡಲು ಯತ್ನಿಸುತ್ತಿರುವ ಕಾಂಗ್ರೆಸ್‌ಗೂ ಹಾಗೆ ಮಾಡಲು ಅವಕಾಶ ನೀಡಲ್ಲ. 10 ವರ್ಷಗಳಿಂದ ಬಿಜೆಪಿ ಕೇಂದ್ರದಲ್ಲಿ ಅಧಿಕಾರದಲ್ಲಿದೆ. ಮೀಸಲು ರದ್ದುಗೊಳಿಸಿಲ್ಲ. ಆದರೆ, ಕಾಂಗ್ರೆಸ್ ನಾಯಕ ರಾಹುಲ್, ಬಿಜೆಪಿ ಮತ್ತೆ ಅಧಿಕಾರಕ್ಕೇರಿದರೆ ಸಂವಿಧಾನ ಬದಲಿಸುತ್ತದೆ ಎಂದು ಸುಳ್ಳು ಹೇಳುತ್ತಿದ್ದಾರೆ. ದೊಡ್ಡ ಸುಳ್ಳು ಹೇಳುವ, ಪುನರಾವರ್ತಿಸುವ ಮೂಲಕ ಕಾಂಗ್ರೆಸ್ ಸುಳ್ಳನ್ನೇ ನಿಜ ಮಾಡಲು ಯತ್ನಿಸುತ್ತದೆ.

-ಅಮಿತ್ ಶಾ
ಕೇಂದ್ರ ಗೃಹ ಸಚಿವ